ಆ) ದಿನಾಂಕ 5.1.05 ರಿಂದ ದಿನವಹಿ ಹಗಲು ವೇಳೆಯಲ್ಲಿ 5 ಗಂಟೆ ರಾತ್ರಿ ಸಮಯದಲ್ಲಿ 4 ಗಂಟೆ: ಹೀಗೆ ಒಟ್ಟು 9 (ಒಂಭತ್ತು) ತಾಸುಗಳ ವಿದ್ಯುಚ್ಛಕ್ತಿಯನ್ನು ನೀರಾವರಿ ಪಂಪ್‌ಸೆಟ್‌ಗಳಿಗೆ ಒದಗಿಸಲಾಗುತ್ತಿದೆ.

ಇ) ಇ, ಈ ಮತ್ತು ಉ

ಹೌದು. ಗಮನಕ್ಕೆ ಬಂದಿದೆ.

ಈ) ಚಿಕ್ಕಮಗಳೂರು ಜಿಲ್ಲೆಗೆ ಹಾಸನದಲ್ಲಿರುವ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಹಾಸನ ವಿತರಣಾ ಕೇಂದ್ರದಲ್ಲಿರುವ ಒಂದು 100 ಎಂ.ವಿ.ಎ. ವಿದ್ಯುತ್ ಪರಮರ್ತಕವು ಜನವರಿ ತಿಂಗಳ ಪ್ರಾರಂಭದಲ್ಲಿ

ಉ) ವಿಫಲಗೊಂಡಿದ್ದರಿಂದ. ಚಿಕ್ಕಮಗಳೂರಿನ ಸರಬರಾಜನ್ನು ಶಿವಮೊಗ್ಗ ಎಂ.ಆರ್.ಎಸ್. ಕೇಂದ್ರದ ಕಡೆಯಿಂದ ಪಡೆಯಲಾಗುತ್ತಿದೆ. ಎಂ.ಆರ್.ಎಸ್. ಕಡೆಯಿಂದ ಸರಬರಾಜು ಪಡೆಯಲು ವಿದ್ಯುತ್ ಮಾರ್ಗದ ಮಿತಿಯಿರುವುದರಿಂದ ನಿಗದಿಪಡಿಸಿದ ಅವಧಿಗಿಂತ ಕಡಿಮೆ ವಿದ್ಯುತ್ ಸರಬರಾಜು ಮಾಡುವ ಸಂದರ್ಭ ಒದಗಿದೆ. ವಿಫಲಗೊಂಡ ಆದಷ್ಟು ಶೀಘ್ರವಾಗಿ ಅದನ್ನು ಅಳವಡಿಸಿ, ನಿಗದಿತ ಅವಧಿಗೆ ವಿದ್ಯುತ್ ಪೂರೈಕೆ ಮಾಡುವ ವ್ಯವಸ್ಥೆ ಮಾಡಲಾಗುವುದು.

66(568) ಶ್ರೀ ಜೀವರಾಜ ಡಿ.ಎನ್. (ಶೃಂಗೇರಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶೃಂಗೇರಿ, ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳಲ್ಲಿನ ಬಹುತೇಕ ರಸ್ತೆಗಳು ನಾದುರಸ್ಥಿಯಾಗಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಅತೀ ಹೆಚ್ಚು ಮಳೆ ಬೀಳುವ ಈ ತಾಲ್ಲೂಕಿನಲ್ಲಿ ರಸ್ತೆ ಸುಸ್ಥಿತಿಯಲ್ಲಿಡಲು ಸರ್ಕಾರ ಹೆಚ್ಚಿನ ಅನುದಾನವನ್ನು ಒದಗಿಸುವುದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿರುತ್ತದೆ.

ಆ) ಮುಖ್ಯ ಮಂತ್ರಿ ಗ್ರಾಮೀಣ ರಸ್ತೆನಿಧಿ 3054 ಯೋಜನೆಯಡಿಯಲ್ಲಿ ಸುಮಾರು 107.50 ಲಕ್ಷಗಳ ಮೊತ್ತದಲ್ಲಿ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಮಾಡುವ ಕಾರ್ಯಕ್ರಮವನ್ನು ಶೀಘ್ರದಲ್ಲಿ ಕೈಗೊಳ್ಳಲಾಗುತ್ತಿದೆ.

ಇ) 2005–06ನೇ ಸಾಲಿನಿಂದ 3 ವರ್ಷಗಳವರೆಗೆ ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು 458 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಿರ್ವಹಿಸಲು ಉದ್ದೇಶಿಸಲಾಗಿದೆ.

67(569) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಭೂಮಿ ಯೋಜನೆಯಡಿ ಪಹಣಿ ಪಡೆಯಲು ಪಾವತಿಸಬೇಕಾದ ಶುಲ್ಕ ಇಳಿಸಲು ಸರ್ಕಾರ ಉದ್ದೇಶಿಸಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗಿನಿಂದ ಜಾರಿಗೆ ತರಲಾಗುವುದು;

ಇ) ಈ ಯೋಜನೆಯನ್ನು ಹೋಬಳಿ ಮಟ್ಟಕ್ಕೆ ವಿಸ್ತರಿಸಲಾಗುವುದು;

ಈ) ಹಾಗಿದ್ದಲ್ಲಿ, ಯಾವಾಗ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಸರ್ಕಾರದ ಮಟ್ಟದಲ್ಲಿ ಈ ರೀತಿಯ ಪ್ರಸ್ತಾವನೆ ಇದೆ. ಕಡಿಮೆಮಾಡಲು ಕ್ರಮಕ್ಕೆಗೊಳ್ಳಲಾಗುವುದು.

ಆ) ಜಾರಿಗೊಳಿಸುವ ದಿನಾಂಕವನ್ನು ಪ್ರಕಟಿಸಲಾಗುವುದು.

ಇ) ಹೌದು

ಈ) ಈ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಗ್ರಾಮ ಮಟ್ಟಕ್ಕೆ ವಿಕೇಂದ್ರೀಕರಿಸಲಾಗಿದೆ. ಇನ್ನು 2–3 ತಿಂಗಳುಗಳಲ್ಲಿ ತಾಲ್ಲೂಕುಗಳು ರಾಜ್ಯ ಮಟ್ಟದಲ್ಲಿ ಜೋಡಣೆಯಾದ ನಂತರ ರೈತರಿಗೆ ಗ್ರಾಮ ಮಟ್ಟದಲ್ಲಿಯೇ ಭೂ ದಾಖಲೆಗಳನ್ನು ಒದಗಿಸಲಾಗುವುದು.

68(570) ಶ್ರೀ ಜೀವರಾಜ ಡಿ.ಎನ್. (ಶೃಂಗೇರಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಉಂಬಳೆ ಬೈಲು ಹಾಗೂ ಕೊಪ್ಪ ನಡುವಿನ ರಸ್ತೆ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಆ) ಶಿವಮೊಗ್ಗ ಶೃಂಗೇರಿ, ಹೊರನಾಡು, ರಂಭಾಪುರಿ ಪೀಠ ಮುಂತಾದ ಪ್ರಸಿದ್ಧ ಯಾತ್ರ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಿದ್ದರೂ ಸಹ ದುರಸ್ಥಿ ಕಾರ್ಯ ಕೈಗೊಳ್ಳದಿರಲು ಕಾರಣವೇನು;

ಇ) ದೇಶ ವಿದೇಶಗಳಿಂದ ಬರುವ ಪ್ರವಾಸಿಗರು ಓಡಾಡುವ ಈ ರಸ್ತೆಯನ್ನು ಕೂಡಲೆ ದುರಸ್ಥಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಸಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಂದಿರುತ್ತದೆ.

ಆ) ಸದರಿ ರಸ್ತೆಯನ್ನು ದಿನಾಂಕ 18–05–2004 ರಲ್ಲಿ ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಈ ರಸ್ತೆಯಲ್ಲಿ ಆಯ್ದ ಭಾಗಗಳಲ್ಲಿ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಇ) 2005–06ನೇ ಸಾಲಿನಿಂದ 3 ವರ್ಷಗಳವರೆಗೆ ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು 458 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಿರ್ವಹಿಸಲು ಉದ್ದೇಶಿಸಲಾಗಿದೆ.

69(859) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಕೆಲವು ಭಾಗಗಳು ಬರಪೀಡಿತ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ತುರ್ತು ಕ್ರಮ ತೆಗೆದುಕೊಂಡಿದೆ;

ಇ) ರಾಜ್ಯದಲ್ಲಿ ಸಕಾಲಕ್ಕೆ ಮಳೆಯಾಗದೆ ತೀವ್ರ ಅಭಾವಕ್ಕೊಳಗಾದ ಎಷ್ಟು ತಾಲ್ಲೂಕುಗಳನ್ನು ಸರ್ಕಾರ ಗುರುತಿಸಿದೆ ಹಾಗೂ ಎಷ್ಟು; ತಾಲ್ಲೂಕುಗಳನ್ನು ಬರ ಪೀಡಿತ ಪ್ರದೇಶಗಳೆಂದು ಘೋಷಿಸಿದೆ;

ಈ) ಇದಕ್ಕಾಗಿ ಸರ್ಕಾರ ನಿಗಧಿ ಮಾಡಿರುವ ನೆರವು ಯಾವುದು ಹಾಗೂ ಇದರ ಮೊತ್ತವೆಷ್ಟು;

ಉ) ಈ ಮೊತ್ತದಲ್ಲಿ ಕೇಂದ್ರಕ್ಕೆ ಸಹಾಯ ಕೋರಿರುವುದೆಷ್ಟು;

ಊ) ಕೇಂದ್ರದಿಂದ ಬಂದಿರುವ ಹಾಗೂ ಬರಬೇಕಾದ ಬಾಕಿ ಸಹಾಯಧನ ಎಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು.